ಅ.ದಾ ನಂ.38/2008

ಡಿ.ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 03-02-2020

**<u>ಮುಂದುವರೆದ ಪಾಟೀ ಸವಾಲುಃ</u>**- ಶ್ರೀ ಕೆ.ಎನ್.ಎಸ್ ವಕೀಲರಿಂದ

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದು ಒ.ಎಸ್ 13/2005 ರ ವಾದ ಪತ್ರ, ಲಿಖಿತ ಹೇಳಿಕೆ, ಸ್ಕೆಚ್ ನಕಲು, ಜಂಟಿ ಮೆಮೋ ಆಗಿದ್ದು ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ನಿಪಿ-73 ಎಂದು ಗುರುತಿಸಲಾಯಿತು. ಒ.ಎಸ್ 13/2005 ರಲ್ಲಿ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ "ನನ್ನ 5 ಗುಂಟೆ ವಿಸ್ತೀರ್ಣವುಳ್ಳ ನಿವೇಶನವು ಪುರಸಭಾ ವ್ಯಾಪ್ತಿಗೆ ಸೇರಿದ ಚನ್ನರಾಯಪಟ್ಟಣ ಟೌನ್ ಕುವೆಂಪು ನಗರ ಬಡಾವಣೆಯಲ್ಲಿದ್ದು, ಸದರಿ ನಿವೇಶನದಲ್ಲಿ ಸಾರ್ವಜನಿಕರ ಉದ್ದೇಶಕ್ಕಾಗಿ ಹಿಂದೆ ಪುರಸಭೆಯವರು ಉತ್ತರ-ದಕ್ಷಿಣಾಭಿಮುಖವಾಗಿ 2 ರಸ್ತೆಗಳನ್ನು ನಿರ್ಮಿಸಿರುತ್ತಾರೆ ಮತ್ತು ನನ್ನ ಸ್ವತ್ತಿನ ಉತ್ತರಕ್ಕೆ ಪೋಲೀಸ್ ಪೇದೆ ಜೆ.ಎ.ಶಿವಣ್ಣ ಎಂದು" ಹೇಳಿರುವುದು ಸರಿಯಾಗಿರುತ್ತದೆ. ಒ.ಎಸ್. 13/2005 ರಲ್ಲಿ ಹಾಜರುಪಡಿಸಿರುವ ನನ್ನ ನಿವೇಶನದ ನಕಾಶೆಯಲ್ಲಿ ರಸ್ತೆಗಳು ಯಾವ ದಿಕ್ಕಿಗೆ ಬರುತ್ತದೆ ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ಫೋಟೋ ತೋರಿಸಲಾಗಿ ಅದು ವಾದಿಯ ಮನೆ ಎಂದು ಒಪ್ಪಿಕೊಂಡ ಮೇರೆಗೆ ನಿಪಿ-74 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-74 ರಲ್ಲಿರುವ ವಾದಿಯ ದಾವಾ ಸ್ವತ್ತಿನಲ್ಲಿರುವ ಮನೆಯನ್ನು ಗುರುತಿಸಿದ್ದು, ದಾವಾ ಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿ ನನ್ನ ಮನೆ ಇದೆ ಎಂದು ಸಾಕ್ಷಿಯು ಒಪ್ಪಿರುತ್ತಾರೆ.

ನನ್ನ ಮನೆಯ ಹಿಂಭಾಗದಲ್ಲಿ ಸ್ಟೇರ್ ಕೇಸ್ ಇದೆ. ಸಾಕ್ಷಿಗೆ ಈಗ ಒಂದು ಫೋಟೋ ತೋರಿಸಲಾಗಿ, ಒಪ್ಪಿಕೊಂಡ ಮೇರೆಗೆ ನಿಪಿ-75 ಎಂದು ಗುರುತಿಸಲಾಯಿತು. ನನ್ನ ಮನೆಯ ಉತ್ತರ ದಿಕ್ಕಿನಲ್ಲಿ ಸೆಟ್ ಬ್ಯಾಕ್ ಬಿಡದೆ ಸ್ಟೇರ್ ಕೇಸ್ ಹಾಕಿದ್ದೇನೆ ಎಂದರೆ ಸರಿ. ಸ್ಟೇರ್ ಕೇಸ್ ಕೆಳಗಡೆ ಒಂದು ಶೌಚಾಲಯ ನಿರ್ಮಿಸಿಕೊಂಡಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ಫೋಟೋ ತೋರಿಸಲಾಗಿ ಅದರಲ್ಲಿ ವಾದಿ ಮನೆ ನಿರ್ಮಿಸಲು ಹಾಕಿರುವ ತಳಪಾಯ ಮತ್ತು ಪಕ್ಕದಲ್ಲಿರುವ ಮನೆ ನನ್ನದೇ ಎಂದು

ಒಪ್ಪಿಕೊಂಡ ಮೇರೆಗೆ ನಿಪಿ-76 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ಫೋಟೋ ತೋರಿಸಲಾಗಿ ಅದರಲ್ಲಿ ನನ್ನ 2 ನೇ ನಿವೇಶನದ ಉತ್ತರ ದಿಕ್ಕಿನಲ್ಲಿ ಜನತಾ ಮನೆ ಇದೆ ಎಂದು ಒಪ್ಪಿಕೊಂಡ ಮೇರೆಗೆ ನಿಪಿ-77 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ಫೋಟೋ ತೋರಿಸಲಾಗಿ ಅದರಲ್ಲಿರುವ ಮನೆ 2 ನೇ ಪ್ರತಿವಾದಿ ರವೀಶ್‌ಗೆ ಸೇರಿದ್ದು ಎಂದು ಒಪ್ಪಿಕೊಂಡ ಮೇರೆಗೆ ನಿಪಿ-78 ಎಂದು ಗುರುತಿಸಲಾಯಿತು. ನಿಪಿ-74 ರಲ್ಲಿರುವ ಮನೆಯ ಮೇಲೆ ನಿಪಿ-76 ರಲ್ಲಿ ಕಾಣುತ್ತಿರುವ ಮನೆಯನ್ನು ಕಟ್ಟಿಕೊಂಡಿದ್ದೇನೆ ಎಂದರೆ ಸರಿ.

ಸೆಟ್ ಬ್ಯಾಕ್ ಬಿಡದೇ ಮತ್ತು ಪರವಾನಿಗೆ ಪಡೆಯದೇ ಮನೆ ಕಟ್ಟಿದ್ದರಿಂದ ಪುರಸಭೆಯವರು ದಂಡ ವಿಧಿಸಿದ್ದಾರೆ ಎಂದರೆ ಸಾಕ್ಷಿಯು ಅಕ್ರಮ-ಸಕ್ರಮದಲ್ಲಿ ಕಟ್ಟಿಕೊಂಡಿದ್ದೇನೆ ಎಂದು ಆಸ್ತಿ ತೆರಿಗೆಯನ್ನು ವಿಧಿಸಿ ವಸೂಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅಕ್ರಮ-ಸಕ್ರಮದಲ್ಲಿ ನಾನು ಎಷ್ಟು ರೂ ದಂಡ ಕಟ್ಟಿದ್ದೇನೆ ಹೇಳಲಾಗುವುದಿಲ್ಲ. ನಮ್ಮ ಮನೆಗೆ ಪ್ರತೀ ವರ್ಷ 3,500/- ಕಂದಾಯ ಕಟ್ಟುತ್ತಿದ್ದೇನೆ. ನಿಪಿ-76 ರಲ್ಲಿ ಕಾಣುತ್ತಿರುವ ನನ್ನ ಮೇಲಂತಸ್ತಿನ ಮನೆಗಳನ್ನು ಬಾಡಿಗೆ ನೀಡಿದ್ದೇನೆ ಎಂದರೆ . ಸದರಿ ಬಾಡಿಗೆ ಮನೆಗಳಿಗೆ ನಾನು ಕಂದಾಯ ಪಾವತಿಸಿಲ್ಲ. ಸದರಿ ಮನೆಗಳನ್ನು 2008 ರಿಂದ ಬಾಡಿಗೆಗೆ ನೀಡಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮನೆಗೆ ಯು.ಜಿ.ಡಿ ಸಂಪರ್ಕ ಇಲ್ಲ, ಕಾರಣ 2008 ರಲ್ಲಿ ವಾದಿ ತಕರಾರು ಮಾಡಿದ್ದರು. ನಿಪಿ-76 ರಲ್ಲಿ ಕಾಣುತ್ತಿರುವ ಪೈಪುಗಳ ಮೂಲಕ ವಾದಿಯ ದಾವಾ ಸ್ವತ್ತಿಗೆ ನೀರನ್ನು ಹರಿಯಬಿಟ್ಟಿದ್ದೇನೆ ಎಂದರೆ ಸಾಕ್ಷಿಯು ನಿಪಿ-76 ರಲ್ಲಿ ಯಾವುದೇ ಪೈಪುಗಳನ್ನು ನಾನು ಅಳವಡಿಸಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನಲ್ಲಿ ನಾನು ಶೌಚ ಗುಂಡಿಗಳನ್ನು ತೆಗೆಯಲು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ. ದಿಃ 10-01-2008 ರಂದು ವಾದಿಯ ದಾವಾಸ್ತಿಯಲ್ಲಿ ಶೌಚ ಗುಂಡಿಗಳನ್ನು ತೆಗೆಯಲು ಪ್ರಯತ್ನಿಸಿದ್ದರಿಂದ ವಾದಿ ನನ್ನ ವಿರುದ್ಧ ಚನ್ನರಾಯಪಟ್ಟಣ ನಗರ ಠಾಣೆಯಲ್ಲಿ ದೂರು ನೀಡಿ, ಪೋಲೀಸರು ನನ್ನನ್ನು ಕರೆಯಿಸಿ ವಿಚಾರಣೆ ಮಾಡಿದ್ದರು ಎಂದರೆ ಸರಿ. ದೂರು ನೀಡಿದ ನಂತರ ನನ್ನ ಹೊಸ ಮನೆಯ ಶೌಚಾಲಯದ ಸಂಪರ್ಕವನ್ನು ನನ್ನ ಕಾಂಪೌಂಡ್ ಒಳಗೆ ನಿರ್ಮಿಸಿಕೊಂಡಿದ್ದೆನು ಎಂದರೆ ಸರಿಯಲ್ಲ.

ಪೋಲೀಸ್ ಠಾಣೆಯಲ್ಲಿ ನನ್ನ ಹೇಳಿಕೆ ಪಡೆದಿರುತ್ತಾರೆ ನನಗೆ ನೆನಪಿಲ್ಲ. ನಿಪಿ-76 ರಲ್ಲಿರುವ ಕಾಣುತ್ತಿರುವ ಗೇಟ್ ನನ್ನ ಮನೆಯದ್ದಲ್ಲ. ನಮ್ಮ ಹೊಸ ಮನೆಯ ಶೌಚಾಲಯದ ಪೈಪುಗಳನ್ನು ಹೊರಗೆ ಬಿಟ್ಟಿದ್ದೇನೆ ಎಂದರೆ ಸರಿ. ನನ್ನ ಶೌಚಾಲಯದ 3 ಅಡಿ ಅಂತರದಲ್ಲಿ ವಾದಿಯ ಶೌಚ ಗುಂಡಿಗಳಿವೆ ಎಂದರೆ ಸರಿ. ನಾನು ಕ್ರಯಕ್ಕೆ ಕೊಂಡಿರುವ ಸ್ವತ್ತಿನ ಮತ್ತು ವಾದಿ ಕ್ರಯಕ್ಕೆ ಕೊಂಡಿರುವ ಸ್ವತ್ತಿನ ಮೂಲ ಕ್ರಯದಾರರು ಮತ್ತು ಸ್ವತ್ತುಗಳು ಬೇರೆ ಬೇರೆ ಎಂದರೆ ಸರಿ. ನಾನು ಕ್ರಯಕ್ಕೆ ಕೊಂಡಿರುವ ಸ್ವತ್ತಿನ ಮೇಲೆ ವಾದಿಗೆ ಯಾವುದೇ ಹಕ್ಕಿರುವುದಿಲ್ಲ, ವಾದಿ ಕ್ರಯಕ್ಕೆ ಕೊಂಡಿರುವ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕಿರುವುದಿಲ್ಲ.

ವಾದಿಗೆ ನಾನು ತೊಂದರೆ ನೀಡಿದ್ದರಿಂದ ನನ್ನ ವಿರುದ್ಧ 2008 ರಲ್ಲಿ ಪ್ರಸ್ತುತ ದಾವೆಯನ್ನು ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ನನಗೆ ತೊಂದರೆ ನೀಡಲು ಸುಳ್ಳು ದೂರು ದಾಖಲು ಮಾಡಿದ್ದಾರೆ ಎಂದು ನುಡಿಯುತ್ತಾರೆ. ವಾದಿಯು ಪ್ರಸ್ತುತ ದಾವೆಯನ್ನು ದಾಖಲು ಮಾಡಿದಾಗ ಯಥಾಸ್ಥಿತಿ ಕಾಪಾಡುವಂತೆ ಆದೇಶವಾಗಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ನಾನು ತಂಟೆ ತಕರಾರು ಮಾಡದಂತೆ ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ದಾವೆಯ ಸಮನ್ಸ್ ಬಂದ ನಂತರ ರವೀಶ್ ಮನೆಯ ಹತ್ತಿರ ಹೋಗಿದ್ದೆ ಎಂದರೆ ಸರಿಯಲ್ಲ. ನಮ್ಮ ಮನೆ ಬಳಿ ಇರುವ ರಂಗೇಗೌಡ, ಗಿರೀಗೌಡ, ನಾರಾಯಣ ಗೊತ್ತಿದೆಯೇ ಎಂಬ ಪ್ರಶ್ನೆಗೆ ರಂಗೇಗೌಡ ಮಾತ್ರ ನನಗೆ ಗೊತ್ತು ಎಂದು ನುಡಿಯುತ್ತಾರೆ. ರಂಗೇಗೌಡ ಮತ್ತು ಇತರೆ 10 ಜನರು ಸೇರಿ ಒ.ಎಸ್. 173/1999 ನ್ನು ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ವಾದಿ ಒತ್ತುವರಿ ಮಾಡಿ ತಳಪಾಯ ಹಾಕಿದ್ದಾರೆ ಎಂದು ದಾವೆ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ರಂಗೇಗೌಡ ಮತ್ತು ಇತರರು ನ್ಯಾಯಾಲಯಕ್ಕೆ ಹಾಜರಾಗದೇ ದಾವೆ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾಗಪ್ಪರವರು ಒ.ಎಸ್. 173/1999 ರಲ್ಲಿ ತೆಗೆದುಕೊಂಡ ವಾದದಂತೆ ಪ್ರತಿವಾದಿ ತೆಗೆದುಕೊಳ್ಳಲು ತಿಳಿಸಿ ನನಗೆ ಈ ದಾವೆಯಲ್ಲಿ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಶೌಚ ಗುಂಡಿಗೆ ವಾದಿ ತಕರಾರು ಮಾಡಿದ್ದರಿಂದ ನಾನು ರಸ್ತೆ ಇದೆ ಎಂದು ಸುಳ್ಳು ಪ್ರತಿವಾದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದಕ್ಕೆ ಪೂರಕವಾಗಿ ರಸ್ತೆ ಇದೆ ಎಂಬುದಕ್ಕೆ ಪೂರಕವಾಗಿ ಯಾವುದೇ

ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ವಾದಿಯು ಕ್ರಯಕ್ಕೆ ಕೊಂಡಿರುವ ಸ್ವತ್ತಿಗೆ ಕಾನೂನು ರೀತಿಯಲ್ಲಿ ನಡೆದುಕೊಳ್ಳಬಹುದು. ಯಾವುದೇ ಒಂದು ಸ್ವತ್ತು ಒತ್ತುವರಿಯಾಗಿದ್ದಾಗ ಅದನ್ನು ಕಂಡುಹಿಡಿಯಲು ಅಳತೆಯಾಗಬೇಕು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯ ಸ್ವತ್ತು, ನನ್ನ ಸ್ವತ್ತು ಮತ್ತು 4 ಮತುತ 5 ನೇ ಪ್ರತಿವಾದಿಗಳ ಸ್ವತ್ತನ್ನು ಒಬ್ಬ ಸರ್ವೆಯರ್ ರವರಿಂದ ಅಳತೆ ಮಾಡಿಸಲು ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಸ್ವತ್ತನ್ನು ಅಳತೆ ಮಾಡಿಸಲು ನನಗೆ ಇಷ್ಟವಿಲ್ಲ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕೆ ಇಷ್ಟವಿಲ್ಲ ಎಂದು ತಿಳಿಸಲು ನನಗೆ ಸಾಧ್ಯವಿಲ್ಲ. ನ್ಯಾಯಾಲಯದ ವತಿಯಿಂದ ಒಬ್ಬ ಸರ್ವೆಯರ್ ರವರನ್ನು ನೇಮಕ ಮಾಡಿ ದಾವಾ ಸ್ವತ್ತು ಮತ್ತು ನನ್ನ ಸ್ವತ್ತಿನ ಉತ್ತರ ದಿಕ್ಕಿನಲ್ಲಿರುವ ರಸ್ತೆಯನ್ನು ಅಳತೆ ಮಾಡಿಸಿದಾಗ ಒಂದು ವೇಳೆ ನಾನು ರಸ್ತೆಯನ್ನು ಒತ್ತುವರಿ ಮಾಡಿರುವುದು ಕಂಡುಬಂದರೆ ನಾನು ಬಿಟ್ಟುಕೊಡಬೇಕಾಗುತ್ತದೆ ಎಂದರೆ ಸಾಕ್ಷಿಯು ನಾನು ಬಿಟ್ಟುಕೊಡುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ಫೋಟೋ ತೋರಿಸಲಾಗಿ ಅದರಲ್ಲಿರುವ ರಸ್ತೆಯನ್ನು 2 ವರ್ಷಗಳ ಹಿಂದೆ ಟಾರು ರಸ್ತೆಯಾಗಿ ಮಾಡಲಾಗಿದೆ ಎಂಬುದನ್ನು ಒಪ್ಪಿಕೊಂಡ ಮೇರೆಗೆ ನಿಪಿ-79 ಎಂದು ಗುರುತಿಸಲಾಯಿತು. ವಾದಿಯ ಸ್ವತ್ತಿನ ಪೂರ್ವ ದಿಕ್ಕಿಗೆ ಪೂರ್ವ ದಿಕ್ಕಿಗೆ ಯಾವುದೇ ರಸ್ತೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

5 ನೇ ಪ್ರತಿವಾದಿ ಕಳೆದ 7 ವರ್ಷಗಳಿಂದ ಮುನ್ಸಿಪಲ್ ಕೌನ್ಸಿಲರ್ ಎಂದರೆ ಸರಿ. 2008 ರಲ್ಲಿ 5 ನೇ ಪ್ರತಿವಾದಿ ಮತ್ತು ಬಾಬುರವರು ಟೆಂಡರ್ ಪಡೆದು ನಮ್ಮ ಮನೆ ಮುಂದಿನ ಚರಂಡಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ವಾದಿ ಅರಸೀಕೆರೆ ಪೋಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಇರಬಹುದು ಎಂದು ನುಡಿಯುತ್ತಾರೆ. 31-12-2007 ರಲ್ಲಿ ನಾಗಮ್ಮ ಎಂಬುವವರಿಗೆ ದಾವಾ ಸ್ವತ್ತನ್ನು ಭೋಗ್ಯಕ್ಕೆ ನೀಡಿದ್ದರು ಎಂದರೆ ಸರಿ. ವಾದಿ ಅರಸೀಕೆರೆಯಲ್ಲಿ ಕೆಲಸ ಮಾಡುತ್ತಿದ್ದಾಗ ನಾನು ಪ್ರತಿವಾದಿ 5 ರವರೊಂದಿಗೆ ಷರೀಕಾಗಿ ಪೂ-ಪಃ 5 ಅಡಿ, ಉ-ದಃ 43 ಅಡಿಯನ್ನು ಒತ್ತುವರಿ ಮಾಡಿ ಚರಂಡಿ ನಿರ್ಮಾಣ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಚರಂಡಿ ನಿರ್ಮಾಣ ಮಾಡಿದರೆ ಮುಂದಿನ 10 ಅಡಿ ಹೆಚ್ಚುವರಿ ಜಾಗ ನನಗೆ ದೊರಕುತ್ತದೆ ಎಂದು ನಾನು

ಶಾಮೀಲಾಗಿದ್ದೆ ಎಂದರೆ ಸರಿಯಲ್ಲ. ಸದರಿ ಚರಂಡಿ ನಶಿಸಿದೆ ಎಂದರೆ ಸರಿ. ನಮ್ಮ ಮನೆಯ ಮುಂದಿನ ಪೂರ್ವ ದಿಕ್ಕಿನಲ್ಲಿ ಪುರಸಭೆಯವರು 30 ಅಡಿ ರಸ್ತೆಯನ್ನು ಮಾಡಲು ನನ್ನ ತಕರಾರು ಇಲ್ಲ ಎಂದರೆ ಸಾಕ್ಷಿಯು ತಕರಾರು ಇದೆ ಎಂದು ನುಡಿಯುತ್ತಾರೆ. ಪುರಸಭೆಯವರು ನನ್ನ ಮನೆಯ ಮುಂದೆ 30 ಅಡಿ ರಸ್ತೆ ನಿರ್ಮಾಣ ಮಾಡಿದರೆ ನನ್ನ 2 ನೇ ನಿವೇಶನದ 10 ಅಡಿ ಜಾಗ ರಸ್ತೆಗೆ ಹೋಗುತ್ತದೆ ಎಂದರೆ ಸರಿಯಲ್ಲ. 10 ಅಡಿ ಜಾಗ ರಸ್ತೆಗೆ ಹೋಗುತ್ತದೆ ಎಂದು ಒ.ಎಸ್. 13/2005 ದಾವೆಯಲ್ಲಿ 45X40 ಅಡಿ ಜಾಗವನ್ನು ಹೆಚ್ಚುವರಿಯಾಗಿ 55X40 ಅಡಿ ಎಂದು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಪುರಸಭೆಯವರೊಂದಿಗೆ ಷರೀಕಾಗಿ ಸ್ವತ್ತಿನಲ್ಲಿದ್ದ ಕಲ್ಲು ಕಂಬಗಳನ್ನು ಹೊಡೆಸಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಪಟ್ಟಂತೆ ವಾದಿ ನನ್ನ ವಿರುದ್ಧ ಸಿ.ಸಿ. 996/2015 ನ್ನು ಮತ್ತು ನವೀನ ಮತ್ತು ನಾಗಪ್ಪರ ಮೇಲೆ ಬೇರೊಂದು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ . ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ್ದರಿಂದ ನನ್ನ ವಿರುದ್ಧ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸಿ.ಸಿ.438/2014 ನ್ನು ವಾದಿ ಮತ್ತು ನನ್ನ ವಿರುದ್ಧ ದಾಖಲು ಮಾಡಿದ್ದೇನೆ ಎಂದರೆ ಸರಿ. ಸಿ.ಸಿ. 438/2014 ರಲ್ಲಿ ನಾರಾಯಣ, ರಂಗೇಗೌಡರವರನ್ನು ಸಾಕ್ಷಿಯಾಗಿ ಮಾಡಿದ್ದೆ ಎಂದರೆ ಸರಿ. ದಾವಾ ಸ್ವತ್ತನ್ನು ವಾದಿಯು ಕ್ರಯಪತ್ರದಂತೆ ಕೊಂಡುಕೊಂಡಿದ್ದಾರೆ ಎಂದರೆ ಸರಿ. ಕ್ರಯಪತ್ರದಂತೆ ವಾದಿಯ ಹೆಸರಿಗೆ ಖಾತೆಯಾಗಿ, ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿ. ಕ್ರಯಪತ್ರದಲ್ಲಿರುವ ಸ್ವತ್ತಿಗೆ ವಾದಿಯೇ ಹಕ್ಕುದಾರ, ಮಾಲೀಕರು ಎಂದರೆ ಸರಿ. ವಾದಿಯ ಕ್ರಯಪತ್ರದ ಸ್ವತ್ತಿಗೆ ನಾನು2008 ರಿಂದ ಇದುವರೆಗೂ ಮೇಲ್ಕಂಡಂತೆ ತಕರಾರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ತನ್ನ ಕ್ರಯದ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು, ಬಾಳೆ ಗಿಡಗಳನ್ನು ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. 2014 ರಲ್ಲಿ ವಾದಿಯ ಸ್ವತ್ತಿನಲ್ಲಿರುವ ಬಾಳೆ ಗಿಡಗಳನ್ನು ಪುರಸಭೆಯವರಿಂದ ಕೀಳಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-76 ರಲ್ಲಿರುವ ಖಾಲಿ ಜಾಗದಲ್ಲಿರುವ ಬಾಳೆ ಗಿಡಗಳನ್ನು ಯಾರು ಹಾಕಿದ್ದಾರೆ ನನಗೆ ಗೊತ್ತಿಲ್ಲ. ನಾನು ದುರುದ್ದೇಶಪೂರ್ವಕವಾಗಿ ವಾದಿಯ ಸ್ವತ್ತಿಗೆ ತಕರಾರು ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಸ್ವತ್ತನ್ನು ಪುರಸಭೆಯವರು ಒತ್ತುವರಿ

ಮಾಡಿ ಚರಂಡಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಚರಂಡಿಯ ನಂತರ ವಾದಿಯ ತಂತಿ ಬೇಲಿ ಇದೆ ಎಂದರೆ ಸರಿಯಲ್ಲ. ನನ್ನ ಮಗ ಉಪನ್ಯಾಸಕಾಗಿ ಹಾಸನದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ನನ್ನ ಸ್ವತ್ತಿನ ದಾಖಲೆಗಳನ್ನು ನಾನು ಇಟ್ಟುಕೊಂಡಿಲ್ಲ, ಅವನ ಬಳಿಯೇ ಇವೆ. ನನ್ನ ಸ್ವತ್ತಿನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿರುವಂತೆ ಪೂ-ಪಶ್ಚಿಮವಾಗಿ ಯಾವುದೇ ರಸ್ತೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ, 5 ನೇ ಪ್ರತಿವಾದಿಗೆ ಗೊತ್ತಿದೆ ಎಂದು ಸಾಕ್ಷಿಯು ನುಡಿಯುತ್ತಾರೆ. ನಾನು 5 ನೇ ಪ್ರತಿವಾದಿಯೊಂದಿಗೆ ಷರೀಕಾಗಿ ಪೂ-ಪಶ್ಚಿಮವಾಗಿ ರಸ್ತೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ 60 ಅಡಿ ಸ್ವತ್ತಿನ ನಂತರ 30 ಅಡಿ ರಸ್ತೆ ಮಾಡಲು ನನ್ನ ತಕರಾರು ಇಲ್ಲ. ವಾದಿಯ ಸ್ವತ್ತಿನಲ್ಲಿ ಯು.ಜಿ.ಡಿ ಸಂಪರ್ಕ ಪಡೆಯಲು ನಾನು ತಕರಾರು ಮಾಡಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ದಾವಾ ಸ್ವತ್ತಿನ 60 ಅಡಿ ಸ್ವತ್ತಿನ ನಂತರ 30 ಅಡಿ ರಸ್ತೆಯನ್ನು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

ವಾದಿಯು ಜನ್ನ ಕವಿ ರಸ್ತೆಯನ್ನು ಒತ್ತುವರಿ ಮಾಡುವವರು ಮತ್ತು ನನ್ನನ್ನು ಸೇರಿಸಿ 30 ಅಡಿ ರಸ್ತೆ ಮಾಡುವಂತೆ ಪ್ರ. ಸಿವಿಲ್ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನಾನು ಯಾವುದೇ ಕಾರಣಕ್ಕೂ 30 ಅಡಿ ರಸ್ತೆಯನ್ನು ಮಾಡಬಾರದು ಎಂದು ತಕರಾರು ಸಲ್ಲಿಸಿದ್ದೆನು ಎಂದರೆ ನನಗೆ ಗೊತ್ತಿಲ್ಲ. ಮೇಲ್ಕಂಡ ಎಲ್ಲಾ ಸತ್ಯಾಂಶಗಳನ್ನು ಮುಚ್ಚಿಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಅಳತೆ ಮಾಡಿಸಲು ನನ್ನ ತಕರಾರು ಇಲ್ಲ. ನನ್ನ ಸ್ವತ್ತಿನ ಉತ್ತರ ದಿಕ್ಕಿನಲ್ಲಿ ವಾದಿಯ ಸ್ವತ್ತಿದ್ದರೂ 13 ಅಡಿ ರಸ್ತೆ ಇದೆ ತಕರಾರು ಸಲ್ಲಿಸಿ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ